3) ಪುನಃಶ್ಚೇತನಗೊಳಿಸುವ ರಸ್ತೆ ಪ್ಯಾಕೇಜ್ M8 - ಕಿಬ್ಬನಹಳ್ಳಿ ಕ್ರಾಸ್‌ನಿಂದ ಹುಳಿಯಾರ್ 36.40 ಕಿಮೀ ರಸ್ತೆ ಕಾಮಗಾರಿ ಜನವರಿ 2003 ರ ಅಂತ್ಯದೊಳಗೆ ಪೂರ್ಣಗೊಳ್ಳಲಿದೆ.

4) ಶ್ರೀರಂಗಪಟ್ಟಣದಿಂದ - ಚೀನ್ಯ (ನಾಗಮಂಗಲ), ಚೀನ್ಯ ನೆಲ್ಲಿಗೆರೆ ಮತ್ತು ನೆಲ್ಲಿಗೆರೆ - ಕಿಬ್ಬನಹಳ್ಳಿ 3 ಪ್ಯಾಕೇಜ್‌ಗಳ ಕಾಮಗಾರಿ ಟೆಂಡರ್ ಕರೆದಿದ್ದು ಗುತ್ತಿಗೆದಾರರ ನೇಮಕ ಪ್ರಕ್ರಿಯೆ ಸದ್ಯದಲ್ಲೇ ಪೂರ್ಣಗೊಂಡು ಫೆಬ್ರವರಿ 2003 ರಿಂದ ಕಾಮಗಾರಿ ಪ್ರಾರಂಭಿಸಿ 12 ತಿಂಗಳ ಅವಧಿಯೊಳಗೆ ಪೂರ್ತಿಗೊಳಿಸಲಾಗುವುದು.

ಉಳಿದ ನಾಲ್ಕು ಪ್ಯಾಕೇಜುಗಳನ್ನು 2003 ಇಸವಿಯಲ್ಲಿ ಹಂತಹಂತವಾಗಿ ಕೈಗೆತ್ತಿಕೊಳ್ಳಲಾಗುವುದು.

ಆ) ಬಂದಿದೆ. ಈ ರಸ್ತೆಯ ಅಭಿವೃದ್ಧಿಯನ್ನು ಮುಂದಿನ ವರ್ಷದಲ್ಲಿ ಮಂಡ್ಯ ಜಿಲ್ಲೆಯ ವಿಶೇಷ ಸಮಗ್ರ ರಸ್ತೆ ಅಭಿವೃದ್ಧಿ ಯೋಜನೆಯಡಿ ಎರಡನೆ ಹಂತದ ಕಾರ್ಯಕ್ರಮದಲ್ಲಿ ಕೈಗೊಳ್ಳಲು ಉದ್ದೇಶಿಸಿದೆ.

ಪ್ರಸಕ್ತ ವಾರ್ಷಿಕ ದುರಸ್ತಿಯಡಿ ಗುಂಡಿಗಳನ್ನು ಮುಚ್ಚಿ ವಾಹನಗಳ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲಾಗುತ್ತಿದೆ.

ಇ)

ವರ್ಷ	ರಾಹೆ -48 ರ ಕಿಮೀ 28 ರಿಂದ 93 ರವರೆಗೆ ಹಣ		ರಾಹೆ - 48 ರ ಕಿಮೀ 93 ರಿಂದ 120 ರವರೆಗೆ ಹಣ	
	ಬಿಡುಗಡೆ	ವೆಚ್ಚ	ಬಿಡುಗಡೆ	ವೆಚ್ಚ
1999-2000	127.11	127.11	33.04	33.04
2000-2001	125.84	125.84	264.24	264.24
2001-2002	643.62	643.62	237.71	237.71
ಒಟ್ಟು	896.57	896.57	534.99	534.99

ಶಿವಮೊಗ್ಗನಗರದ ನವಿಲೆ ಗ್ರಾಮದಲ್ಲಿ ಫುಟ್‌ಬಾಲ್ ಕ್ರೀಡಾಂಗಣ ನಿರ್ಮಾಣ

1918 (2187) ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ) ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿವಮೊಗ್ಗ ನಗರದ ನವಿಲೆ ಗ್ರಾಮದಲ್ಲಿರುವ ಕೆರೆಯಲ್ಲಿ ಫುಟ್‌ಬಾಲ್ ಕ್ರೀಡಾಂಗಣವನ್ನು ನಿರ್ಮಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್ (ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು) :

ಅ) ನವಿಲೆ ಗ್ರಾಮದಲ್ಲಿ ಫುಟ್‌ಬಾಲ್ ಕ್ರೀಡಾಂಗಣ ನಿರ್ಮಾಣದ ಪ್ರಸ್ತಾವನೆಯು ಸರ್ಕಾರದಲ್ಲಿ ಇಲ್ಲ.